**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ23-06-2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ.ಎಸ್.ವಿ.ಎಸ್. ವಕೀಲರಿಂದಃ**

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ದೂರುದಾರರ ತಂದೆ ಪರಿಚಯ ಇರುತ್ತಾರೆ. ಆದರೆ ದೂರುದಾರರು ಪರಿಚಯ ಇರುವುದಿಲ್ಲ. ನನಗೆ ಕರ್ನಾಟಕ ಬ್ಯಾಂಕ್, ಸಕಲೇಶಪುರ ಶಾಖೆಯಲ್ಲಿ ಖಾತೆ ಇರುತ್ತದೆ. ನಿಪಿ-1 ಚೆಕ್ ನನ್ನದೇ ಆಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಈ ಪ್ರಕರಣದಲ್ಲಿ ದೂರುದಾರರು ನನಗೆ ನೋಟೀಸು ಕಳುಹಿಸಿದ್ದರು ಎಂದರೆ ಸರಿ. ನಾನು ಮರುಉತ್ತರವನ್ನು ನೀಡಿರುವುದಿಲ್ಲ. ವೆಂಕಟರಮಣಶೆಟ್ಟಿ ರವರಿಂದ ಅಕ್ಟೋಬರ್-ನವೆಂಬರ್, 2002ರಲ್ಲಿ ರೂ.25,000/- ಪಡೆದಿರುತ್ತೇನೆ. ಆದರೆ ನಿಖರವಾದ ದಿನಾಂಕ ಗೊತ್ತಿಲ್ಲ. ಫೆಬ್ರವರಿ-2003ರಲ್ಲಿ ಹಣ ಮರುಪಾವತಿ ಮಾಡಿರುತ್ತೇನೆ. ಆದರೆ ತಾರೀಖು ನಿಖರವಾಗಿ ಗೊತ್ತಿಲ್ಲ. ಆ ಸಮಯದಲ್ಲಿ ವೆಂಕಟರಮಣಶೆಟ್ಟಿರವರು ಕರ್ನಾಟಕ ಬ್ಯಾಂಕ್ 2-3 ಚೆಕ್ಕುಗಳನ್ನು ಪಡೆದುಕೊಂಡಿದ್ದರು. ಚೆಕ್ ನಂಬರ್ ಮತ್ತು ದಿನಾಂಕ ಹೇಳಲು ಆಗುವುದಿಲ್ಲ. ನಾನು ವೆಂಕಟರಮಣಶೆಟ್ಟಿರವರಿಂದ 10 ಬಾರಿ ಸಾಲ ಪಡೆದಿರುತ್ತೇನೆ ಎಂದು ತಿಳಿಸಿದ್ದು, ಯಾವ-ಯಾವ ತಾರೀಖಿನಂದು ಪಡೆದಿರುತ್ತೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆದರೆ ಪ್ರತಿ ಬಾರಿ ರೂ.25,000/- ದಿಂದ ರೂ.50,000/- ಸಾಲ ಪಡೆದು ಮರುಪಾವತಿ ಮಾಡಿರುತ್ತೇನೆ.

2017ರ ಮಾರ್ಚ್ ತಿಂಗಳಿನಲ್ಲಿ ರೂ.50,000/- ಹಣ ಪಡೆದಿರುತ್ತೇನೆ. ಆದರೆ ತಾರೀಖು ನೆನಪಿಲ್ಲ. 2018ರಲ್ಲಿ ಕರ್ನಾಟಕ ಬ್ಯಾಂಕ್ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಆದರೆ ಚೆಕ್ ನಂಬರ್ ಮತ್ತು ದಿನಾಂಕ ನೆನಪಿಲ್ಲ. ಚೆಕ್ ವಾಪಸ್ಸು ಕೊಡುವಂತೆ ನಾನು ಲಿಖಿತವಾಗಿ ನೋಟೀಸು ನೀಡಿರುವುದಿಲ್ಲ. 2021ರಲ್ಲಿ ಬೆದರಿಕೆ ಹಾಕಿದ್ದಾರೆ ಎಂದು ಹೇಳಿದ್ದು, ನಾನು ಆ ಸಮಯದಲ್ಲಿ ಯಾವುದೇ ದೂರು ನೀಡಿಲ್ಲ. ದೂರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಮುಖ್ಯ ವಿಚಾರಣೆ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-5ರಲ್ಲಿರುವ ಸಹಿ ನನ್ನದೇ ಇರುತ್ತದೆ. ನಿಪಿ-1 ಚೆಕ್ಕನ್ನು ದಿಃ15/10/2023ರಂದು ದೂರುದಾರರಿಂದ ಸಾಲ ಪಡೆದು ಅದೇ ದಿನ ಚೆಕ್ ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರುದಾರರು ಬ್ಯಾಂಕಿಗೆ ಹಾಕಿದಾಗ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿರುತ್ತದೆ

ಎಂದರೆ ಸರಿ. ದೂರುದಾರರಿಂದ 8ಲಕ್ಷ ಹಣ ಪಡೆದು ಅದನ್ನು ಮರುಪಾವತಿ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**